**ಸಾಕ್ಷಿಯನ್ನು ದಿನಾಂಕ 03.06.2025 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**.

**ಪಾಟೀ ಸವಾಲುಃ ಪ್ರತಿವಾದಿಯ ಪರ ಶ್ರೀ ಹೆಚ್ ಪಿ ಎನ್ ವಕೀಲರಿಂದಃ**

1. ನಾನು ಶಿವಮೊಗ್ಗದ ಜೋಸೇಫ್ ನಗರದಲ್ಲಿ ವಾಸವಿದ್ದೇನೆ ಎಂದರೆ ಸರಿ. ನನಗೆ ಸೀಗೆಬಾಗಿಯಲ್ಲಿ ಮನೆ ಇದೆ. ನಾನು ಕಳೆದ 20 ವರ್ಷಗಳಿಂದ ಶಿವಮೊಗ್ಗದಲ್ಲಿ ವಾಸವಿದ್ದೇನೆ. ಸೀಗೆಬಾಗಿಯ ಮನೆಯಲ್ಲಿ ಈಗ ನನ್ನ ಅಕ್ಕ ವಾಸವಿದ್ದಾರೆ.
2. ದಾವಾ ಸ್ವತ್ತುಗಳು ಮೂಲತಃ ನನ್ನ ತಂದೆಯ ಹೆಸರಿಗೆ ಇತ್ತು. ಸದರಿ ಸ್ವತ್ತು ನನ್ನ ತಂದೆಗೆ ಪಿತ್ರಾರ್ಜಿತವಾಗಿ ಬಂದಿತ್ತು. ಸದರಿ ಸ್ವತ್ತನ್ನು ಮೂಲತಃ ನನ್ನ ತಾತಾ ಖರೀದಿ ಮಾಡಿದ್ದರು. ಆ ಸಂಬಂಧ ದಾಖಲೆ ಇಲ್ಲ. ಸಾಕ್ಷಿ ಪುನಃ ಮೂಲ ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ ಎನ್ನುತ್ತಾರೆ. ದಾವಾ ಸ್ವತ್ತಿನ ಖಾತೆ-ಪಹಣಿ ಹಲವಾರು ವರ್ಷ ನನ್ನ ತಂದೆಯ ಹೆಸರಿಗೆ ಇತ್ತು. ಸಂಬಂಧ ದಾಖಲೆಗಳನ್ನು ಕೊಟ್ಟಿದ್ದೇನೆ. ದಾವಾ ಸರ್ವೆ ನಂಬರ್ 55 ರಲ್ಲಿ ನನ್ನ ತಂದೆಗೆ ಒಟ್ಟಾರೆ 6 ಎಕರೆ ಜಮೀನು ಇತ್ತು. ಆ ಪೈಕಿ 1 ಎಕರೆ ಜಮೀನನ್ನು ಮಾರಾಟ ಮಾಡಲಾಗಿದೆ. ಯಾರಿಗೆ ಮಾರಾಟ ಮಾಡಲಾಗಿದೆ ಎನ್ನುವುದು ನನಗೆ ಗೊತ್ತಿಲ್ಲ. ಸದರಿ 1 ಎಕರೆ ಜಮೀನಿನಲ್ಲಿ ಮನೆಗಳನ್ನು ಕಟ್ಟಲಾಗಿದೆ ಎಂದರೆ ಸರಿ. ಸದರಿ ಜಮೀನು ಮತ್ತು ಮನೆಗಳು ಗ್ರಾಮ ಪಂಚಾಯಿತಿಗೆ ಒಳಪಟ್ಟು ಮನೆಗಳಿಗೆ ಖಾತೆ ಸಂಖ್ಯೆ ಕೊಡಲಾಗಿದೆ ಎನ್ನುವುದು ಸರಿಯಲ್ಲ.
3. ಪ್ರಸ್ತುತ ದಾವಾ ಸ್ವತ್ತಿನಲ್ಲಿ ಕೃಷಿ ಜಮೀನು ಲಭ್ಯವಿಲ್ಲ, ಬದಲಾಗಿ ಅದು ಗ್ರಾಮ ಪಂಚಾಯಿತಿಗೆ

ವ್ಯಾಪ್ತಿಗೆ ಒಳಪಟ್ಟಿದ್ದು, ಅದರಲ್ಲಿ ಮನೆ ಕಟ್ಟಲಾಗಿದೆ ಎನ್ನುವುದು ಸರಿಯಲ್ಲ. ನನ್ನ ತಂದೆಗೆ ದಾವಾ ಸರ್ವೆ ನಂಬರ್ 55 ರಲ್ಲಿ ಲಭ್ಯವಿದ್ದ 5 ಎಕರೆ 19 ಗುಂಟೆ ಜಮೀನಿನ ಪೈಕಿ ಸುಮಾರು 2 ಎಕರೆ ಜಮೀನನ್ನು ಹಲವರಿಗೆ ಮಾರಾಟ ಮಾಡಿದ್ದು, ಸದರಿ ಜಮೀನಿನಲ್ಲಿ ಹಲವು ಮನೆಗಳನ್ನು ಕಟ್ಟಲಾಗಿದೆ ಎನ್ನುವುದು ಸರಿಯಲ್ಲ. ಸದರಿ ಮನೆಗಳಿಗೆ ಪಂಚಾಯಿತಿಯಲ್ಲಿ ಮತ್ತು ನಗರ ಸಭೆಯಲ್ಲಿ ಖಾತೆ ಮಾಡಿಸಲಾಗಿದೆ ಎನ್ನುವುದು ಸರಿಯಲ್ಲ. ನನ್ನ ತಂದೆಯಿಂದ ಜಮೀನು ಖರೀದಿ ಮಾಡಿದವರು ಅದನ್ನು ಭೂ ಪರಿವರ್ತನೆ ಆದೇಶ ಮಾಡಿಸಿ ನಂತರ ಮನೆಗಳನ್ನು ಕಟ್ಟಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ.ನಿಯಮಾನುಸಾರ ಮನೆ ಕಟ್ಟಿಕೊಂಡು ಖರೀದಿದಾರರು ತಮ್ಮ ಹೆಸರಿಗೆ ಕಾನೂನು ಬದ್ಧ ದಾಖಲೆಗಳನ್ನು ಪಡೆದುಕೊಂಡಿದ್ದಾರೆ ಎನ್ನುವುದು ಸುಳ್ಳು.

4. ದಾವಾ ಸ್ವತ್ತುಗಳ ಅಸ್ತಿತ್ವದ ಬಗ್ಗೆ ನನಗೆ 2012 ರಲ್ಲಿ ಗೊತ್ತಾಯಿತು. ಅದಕ್ಕೂ ಮೊದಲು ನನಗೆ ಏನೂ ಗೊತ್ತಿರಲಿಲ್ಲ. ದಾವಾ ಷೆಡ್ಯೂಲ್ ಎ ಸ್ವತ್ತಿನ ಚಕ್ಕುಬಂಧಿಯನ್ನು ಲಭ್ಯವಿದ್ದ ದಾಖಲೆಯ ಆಧಾರದಲ್ಲಿ ನಮೂದಿಸಲಾಗಿದೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಕೊಟ್ಟಿದ್ದೇನೆ. ನಾನು ಹಾಜರುಪಡಿಸಿರುವ ದಾಖಲೆಗಳಲ್ಲಿ ದಾವಾ ಷೆಡ್ಯೂಲ್ ಎ ಸ್ವತ್ತಿನ ನಿರೂಪಿಸುವ ಯಾವುದೇ ದಾಖಲೆಗಳು ಇಲ್ಲ ಎನ್ನುವುದು ಸರಿಯಲ್ಲ. ನಿಪಿ–10 ಮತ್ತು 11 ರ ದಾಖಲೆಗಳ ಪ್ರಕಾರ ದಾವಾ ಸರ್ವೆ ನಂಬರ್ 55 ರಲ್ಲಿ 5 ಎಕರೆ 21.5 ಗುಂಟೆ ಜಮೀನು ಇದೆ ಎಂದರೆ ಸರಿ. ಆ ಪೈಕಿ 10 ಗುಂಟೆ ಖರಾಬು ಇದೆ ಎಂದರೆ ಸರಿ. ಖರಾಬು ಸೇರಿ 5 ಎಕರೆ 31.5 ಗುಂಟೆ ಜಮೀನು ಇದೆ ಎಂದರೆ ಸರಿ. ದಾವಾ ಷೆಡ್ಯೂಲ್ ಎ ಎಂದು

ನಮೂದಿಸಿರುವ 4 ಎಕರೆ 21.04 ಗುಂಟೆ ಜಮೀನು ಅಸ್ತಿತ್ವದಲ್ಲಿ ಎಂದು ತೋರಿಸುವ ಯಾವುದೇ ದಾಖಲೆ ಕೊಟ್ಟಿಲ್ಲ ಎನ್ನುವುದು ಸರಿಯಲ್ಲ.

5. ನನ್ನ ತಂದೆ 1989 ರಲ್ಲಿ ತೀರಿಕೊಂಡಿದ್ದರು. ನನ್ನ ತಂದೆ ತೀರಿಕೊಂಡ ನಂತರ ಅವರಿಗೆ ದಾವಾ ಸರ್ವೆ ನಂಬರ್ 55 ರಲ್ಲಿ ಲಭ್ಯವಿದ್ದ ಜಮೀನಿನ ದಾಖಲೆಗಳನ್ನು ನಿಪಿ-1 ರ ಪಾಲು ವಿಭಾಗ ಆಗುವವರೆಗೆ ನಮ್ಮಗಳ ಹೆಸರಿಗೆ ಬದಲಾವಣೆ ಮಾಡಿಕೊಂಡಿರಲಿಲ್ಲ ಎಂದರೆ ಸರಿ. 1989 ರಿಂದ ನಿಪಿ-1 ರ ಪಾಲು ವಿಭಾಗ ಆಗುವವರೆಗೂ ಸದರಿ ಜಮೀನಿನಲ್ಲಿ ಏನೇನು ಬೆಳೆವಣಿಗೆ ಆಯಿತು ಎನ್ನುವುದು ನನಗೆ ಗೊತ್ತಿಲ್ಲ ಎಂದು ಸೂಚಿಸಿದರೆ ಸಾಕ್ಷಿ ಖಾಲಿ ಜಮೀನು ಇದೆ ಎನ್ನುತ್ತಾರೆ. ಖಾಲಿ ಜಮೀನಿನನ್ನು ನನ್ನ ಮಾವ ರಾಣೋಜಿರಾವ್ ಮತ್ತು ಅಕ್ಕ ಶಾಂತಬಾಯಿ ನೋಡಿಕೊಳ್ಳುತ್ತಿದ್ದರು. ನನ್ನ ಮಾವ ತೀರಿಕೊಂಡಿದ್ದಾರೆ. ನನ್ನ ಅಕ್ಕ ಬದುಕಿದ್ದಾರೆ. ನನ್ನ ಮಾವ ಮತ್ತು ಅಕ್ಕ ದಾವಾ ಸ್ವತ್ತುಗಳನ್ನು ನೋಡಿಕೊಳ್ಳುತ್ತಿದ್ದರು ಎಂದು ತೋರಿಸುವ ದಾಖಲೆ ಇಲ್ಲ.

6. ದಾವಾ ಸ್ವತ್ತು ಕೃಷಿ ಯೋಗ್ಯ ಜಮೀನಾಗಿ ಉಳಿದಿಲ್ಲ ಮತ್ತು ಅದರಲ್ಲಿ ನಿವೇಶನಗಳನ್ನು ಮಾಡಲಾಗಿದೆ ಎಂದರೆ ಸರಿ. ನಾನು ಸಹ ದಾವಾ ಸರ್ವೆ ನಂಬರ್ 55 ರಲ್ಲಿ ನನ್ನ ತಂದೆಗೆ ಲಭ್ಯವಿದ್ದ ಜಮೀನಿನಲ್ಲಿ ಮನೆ ಕಟ್ಟಿಕೊಳ್ಳುವ ಸಲುವಾಗಿ 10-12 ಜನರಿಗೆ ಗುಂಟೆ ಲೆಕ್ಕದಲ್ಲಿ ಮಾರಾಟ ಮಾಡಿದ್ದೇನೆ ಎಂದರೆ ಸರಿ. ನನ್ನ ತಂದೆ ಅವರ ಜೀವಿತಾವಧಿಯಲ್ಲಿ ನನ್ನಂತೆ ಮಾರಾಟ ಮಾಡಿದ್ದ ಜಾಗದಲ್ಲಿ ಹಲವರು ಮನೆಗಳನ್ನು ಕಟ್ಟಿಕೊಂಡಿದ್ದರು ಮತ್ತು ಆ ಪೈಕಿ ನೋಂದಣಿ ಪತ್ರ ಆಗದೇ ಇದ್ದವರಿಗೆ ನಾನು ಹಣ ಪಡೆದು ಕ್ರಯ ಪತ್ರ ನೋಂದಣಿ

ಮಾಡಿಕೊಟ್ಟಿದ್ದೇನೆ ಎನ್ನುವುದು ಸರಿಯಲ್ಲ.

7. ದಾವಾ ಷೆಡ್ಯೂಲ್ ಬಿ ಸ್ವತ್ತಿನಲ್ಲಿ ಅಳತೆಯನ್ನು ಯಾವ ಆಧಾರದಲ್ಲಿ ನಮೂದಿಸಿದ್ದೀರಿ ಎಂಬ ಪ್ರಶ್ನೆಗೆ ಸಾಕ್ಷಿ ಪ್ರತಿವಾದಿ ಸದರಿ ಸ್ವತ್ತಿಗೆ ಸಂಬಂಧಪಟ್ಟ ದಾಖಲೆಗಳಲ್ಲಿ 60 x 80 ಎಂದು ಅದರ ವಿಸ್ತೀರ್ಣವನ್ನು ನಮೂದು ಮಾಡಿಕೊಂಡಿದ್ದಾರೆ ಮತ್ತು ಅದೇ ಆಧಾರದಲ್ಲಿ ನಾನು ಸಹ ಅಳತೆ ನಮೂದು ಮಾಡಿದ್ದೇನೆ ಎನ್ನುತ್ತಾರೆ. ದಾವಾ ಷೆಡ್ಯೂಲ್ ಬಿ ಸ್ವತ್ತಿನ ಅಳತೆ ಮತ್ತು ಚಕ್ಕುಬಂಧಿ ತೋರಿಸುವ ಸಲುವಾಗಿ ದಾಖಲೆ ಕೊಟ್ಟಿಲ್ಲ. ಸದರಿ ಸ್ವತ್ತನ್ನು ನಾನು ಯಾವತ್ತು ಅಳತೆ ಮಾಡಿಲ್ಲ ಎಂದರೆ ಸರಿ.

8. ನಿಪಿ–7 ರ ಮ್ಯುಟೇಷನ್ ಉಪ ವಿಭಾಗಾಧಿಕಾರಿಗಳ ಆದೇಶದ ಮೇರೆಗೆ ಆಗಿದೆ ಎಂದರೆ ಸರಿ. ಸದರಿ ಮ್ಯುಟೇಷನ್ 5 ಎಕರೆ 19.4 ಗುಂಟೆ ಸಂಬಂಧಪಟ್ಟಿದೆ ಎಂದರೆ ಸರಿ. ನಿಪಿ–8 ರ ಪಹಣಿ 4 ಎಕರೆ 34 ಗುಂಟೆಗೆ ಕೊಡಲಾಗಿದೆ ಎಂದರೆ ಸರಿ. ಪಹಣಿಯಲ್ಲಿ ಜಮೀನಿನ ವಿಸ್ತೀರ್ಣ ಯಾವ ಕಾರಣಕ್ಕೆ ಕಡಿಮೆಯಾಗಿದೆ ಎಂಬ ಪ್ರಶ್ನೆಗೆ ಸಾಕ್ಷಿ 5 ಎಕರೆ 19.4 ಗುಂಟೆಯಲ್ಲಿ ನಾನು ಮಾರಾಟ ಮಾಡಿರುವ ಜಾಗವನ್ನು ಕಳೆದು ಉಳಿದ ವಿಸ್ತೀರ್ಣವನ್ನು ನಿಪಿ–8 ರ ಪಹಣಿಯಲ್ಲಿ ತೋರಿಸಿದ್ದಾರೆ ಎನ್ನುತ್ತಾರೆ. ಸದರಿ ಸಂಗತಿಯನ್ನು ನಾನು ಹಾಜರುಪಡಿಸಿರುವ ದಾಖಲೆಯಲ್ಲಿ ಉಲ್ಲೇಖಿಸಿಲ್ಲ ಎಂದರೆ ಸರಿ.

**ಈ ಹಂತದಲ್ಲಿ ಪ್ರತಿವಾದಿ ಪರ ವಕೀಲರು ಕಾಲವಾಕಾಶ ಕೋರಿದ್ದರಿಂದ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು.**

(ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ.

**C/c 1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,**

ಭದ್ರಾವತಿ.

1 ನೇ ಹೆಚ್ಚುವರಿ/ ಪ್ರಧಾನ ಸಿವಿಲ್ ನ್ಯಾಯಾಧೀಶರು,
ಭದ್ರಾವತಿ.

ಸಾಕ್ಷಿ ತನಗೆ ಕನ್ನಡ ಭಾಷೆ ಮಾತನಾಡಲು ಬರುವುದಿಲ್ಲ ಮತ್ತು ಕೇವಲ ತೆಲುಗು ಭಾಷೆ ಮಾತನಾಡುವುದರಿಂದ ತೆಲುಗು ಮತ್ತು ಕನ್ನಡ ಎರಡೂ ಭಾಷೆಯನ್ನು ಮಾತನಾಡುವ ಮತ್ತು ನ್ಯಾಯಾಲಯದಲ್ಲಿ ಹಾಜರಿರುವ ಶ್ರೀ ಜಗನ್ನಾಥ ಎಸ್.ಕೆ. ವಕೀಲರನ್ನು ಭಾಷಾಂತರಕಾರರನ್ನಾಗಿ ನೇಮಕ ಮಾಡಿಕೊಂಡು ಸಾಕ್ಷಿಗೆ ತೆಲುಗಿನಲ್ಲಿ ಪ್ರಮಾಣ ವಚನ ಬೋಧಿಸಲಾಯಿತು.

(ಸಾಕ್ಷಿ ತೆಲುಗು ಭಾಷೆಯಲ್ಲಿ ಹೇಳಿದ್ದನ್ನು ಭಾಷಾಂತರಕಾರರು ಹಾಗೂ ವಕೀಲರಾದ ಶ್ರೀ ಜಗನ್ನಾಥ ಎಸ್.ಕೆ. ರವರು ಯಥಾವತ್ತಾಗಿ ಕನ್ನಡಕ್ಕೆ ಭಾಷಾಂತರಿಸಿದ್ದನ್ನು ದಾಖಲಿಸಿಕೊಳ್ಳಲಾಗಿದೆ.)